ಏನಿಲ್ಲವೆಂದರೂ ನಾಲ್ಕು ನೂರು ಪೌಂಡ್ ಹಣವನ್ನು ಗ್ರಾಹಕರು ಕೊಡುತ್ತಿದ್ದರು. ರಜೆ ತೆಗೆದುಕೊಂಡರೆ ಆ ಹಣವನ್ನವರು ಕೊಡುತ್ತಿರಲಿಲ್ಲ. ಅದೆಲ್ಲಾ ಖರ್ಚನ್ನು ಸರಿದೂಗಿಸುವುದು ಹೇಗೆ? ಕೊನೆಗೆ ಆಲೋಚಿಸಿ 'ಮೂರು ವಾರಗಳ ಕಾಲ ಮಾತ್ರ ಬಂದು ಹೋಗು. ಅನಂತರ ನೋಡೋಣ' ಎಂದು ಅನುಮತಿ ಇತ್ತೆ.

ಅದೇ ಕೊನೆ. ಮತ್ತೆ ಅವನು ನನಗೆ ಮಾತನಾಡಲು ಸಿಗಲೇ ಇಲ್ಲ.

★★★

ವೆಂಕಯ್ಯ ನಾಪತ್ತೆಯಾಗಿ ಹೋದ. ಅವನಿಗೆ ಫೋನ್ ಮಾಡಿದರೆ ಅದು ಸ್ವಿಚ್ ಆಫ್ ಆಗಿದೆ ಎಂದು ಬಂತು. ಮನೆಯ ವಿಳಾಸವನ್ನು ಸಂದರ್ಶನದ ಸಮಯದಲ್ಲಿ ಕೊಟ್ಟಿದ್ದ. ಅಲ್ಲಿಗೆ ಕೊರಿಯರ್‌ನಲ್ಲಿ ಪತ್ರ ಬರೆದರೆ, ಅದಕ್ಕೂ ಉತ್ತರ ಬರಲಿಲ್ಲ. ಅವನ ಗೆಳೆಯರನ್ನು ವಿಚಾರಿಸಿದರೆ, ತಮಗೇನೂ ಗೊತ್ತಿಲ್ಲವೆಂದು ಹೇಳಿದರು. ಯಾರಾದರೂ ನಮ್ಮ ಉದ್ಯೋಗಿಯನ್ನೇ ಆ ಊರಿಗೆ ಕಳುಹಿಸೋಣವೇ ಎಂಬ ಆಲೋಚನೆ ಬಂತು. ಆದರೆ ಅದು ವಿಪರೀತ ಗೂಢಾಚಾರಿ ಕೆಲಸವಾಗುತ್ತದೆಂದು ತಿಳಿದು ಸುಮ್ಮನಾದೆ. ಬೇರೆ ಕಂಪೆನಿಗಳಿಗೆ ಸೇರಿರಬಹುದು ಎಂಬ ಅನುಮಾನದಿಂದ, ಗೊತ್ತಿದ್ದ ಒಂದಿಬ್ಬರು ಎಚ್‌ಆರ್ ಮ್ಯಾನೇಜರ್ ಜೊತೆಗೆ ವಿಚಾರಿಸಿದೆ. ಯಾವ ಕುರುಹೂ ಸಿಗಲಿಲ್ಲ. ಅಷ್ಟಕ್ಕೂ ನಾವು ರಿಲೀವಿಂಗ್ ಲೆಟರ್ ಕೊಡದೆ, ಇನ್ನೊಂದು ದೊಡ್ಡ ಕಂಪೆನಿ ಅವನನ್ನು ಸೇರಿಸಿಕೊಳ್ಳುವುದು ಸ್ವಲ್ಪ ಕಷ್ಟ ಎನ್ನುವ ವಿಚಾರ ನನಗೆ ಗೊತ್ತಿತ್ತು.

ಗ್ರಾಹಕರು ಒಂದೇ ಸವನೆ ಅವನ ಬಗ್ಗೆ ವಿಚಾರಿಸ ತೊಡಗಿದರು. ಮೊದಲಿಗೆ ಸೌಜನ್ಯಕ್ಕಾಗಿ ವೆಂಕಯ್ಯನ ಅಪ್ಪ ಹೇಗಿದ್ದಾರೆ ಎಂದು ಕೇಳಿ, ಅನಂತರ ನೇರವಾಗಿ ಅವನು ಯಾವಾಗ ಬರುತ್ತಾನೆ ಎಂದು ವಿಚಾರಿಸಿದರು. ಕೆಲವು ದಿನಗಳ ಕಾಲ ಏನೇನೋ ನೆಪಗಳನ್ನು ಕೊಟ್ಟರೂ ಕೊನೆಗೆ ಸತ್ಯವನ್ನು ಹೇಳಬೇಕಾಯ್ತು. ಇದ್ದಕ್ಕಿದ್ದಂತೆ ಒಬ್ಬ ವ್ಯಕ್ತಿ ಹಾಗೆ ನಾಪತ್ತೆಯಾಗುವುದೆಂದರೆ ಏನು? ಎಂದು ಅವರು ನನ್ನ ಮಾತನ್ನು ನಂಬಲೇ ಇಲ್ಲ. ಪ್ರಾಜೆಕ್ಟ್‌ನಲ್ಲಿ ಸಾಕಷ್ಟು ತೊಡಗಿಸಿಕೊಂಡಿದ್ದ ವೆಂಕಯ್ಯನ ಅನುಪಸ್ಥಿತಿ ಅವರಿಗೆ ಸಾಕಷ್ಟು ತೊಂದರೆಯನ್ನು ಕೊಡುತ್ತಿತ್ತು. ಒಂದು ತಿಂಗಳ ಕಾಲ ಕಾದು, ಅನಂತರ ಬೇರೊಬ್ಬನನ್ನು ಆ ಜಾಗಕ್ಕೆ ಕಳುಹಿಸಿಕೊಟ್ಟೆ. ನಮ್ಮ ಕಂಪೆನಿಯಲ್ಲಿದ್ದ ಅವನ ಉದ್ಯೋಗಸ್ಥ ಸ್ಥಾನವನ್ನು ಹೊಡೆದು ಹಾಕಿದೆವು.

★★★

ಸುಮಾರು ಮೂರು ತಿಂಗಳ ನಂತರ ಅವನದೇ ಜಿಲ್ಲೆಯ ತೆಲುಗು ಸಹೋದ್ಯೋಗಿ ಶ್ರೀನಿವಾಸುಲು ನನ್ನೊಡನೆ ವೈಯಕ್ತಿಕವಾಗಿ ಮಾತನಾಡುವ ಉತ್ಸಾಹವನ್ನು ಮುಂದಿಟ್ಟ. ವೆಂಕಯ್ಯನ ಕುರಿತಾಗಿ ಕೆಲವು ಸಂಶಯಗಳನ್ನು ನಿಮ್ಮ ಮುಂದೆ ಇಡಬೇಕು ಎಂದು ಹೇಳಿದ. ತಕ್ಷಣವೇ ಅವನಿಗೆ ಭೇಟಿಯಾಗಲು ಅವಕಾಶವನ್ನು ಕೊಟ್ಟೆ. ಮೂರು ತಿಂಗಳ ಹಳೆಯ ತೆಲುಗು ದಿನಪತ್ರಿಕೆಯೊಂದನ್ನು ಹಿಡಿದುಕೊಂಡು ಶ್ರೀನಿವಾಸುಲು ನನ್ನ ಕೋಣೆಗೆ ಬಂದ. ಆ ತೆಲುಗು ಪತ್ರಿಕೆಯನ್ನು ನನ್ನ ಮುಂದೆ ಹರವಿ, ಐದನೆಯ ಪುಟದಲ್ಲಿ ಬಹುಚಿಕ್ಕದಾಗಿ ಪ್ರಕಟವಾದ ಒಂದು ಪ್ರಕಟಣೆಯನ್ನು ಓದಲು ಕೇಳಿಕೊಂಡ. ಬಳ್ಳಾರಿಯವನಾದ ನನಗೆ ತೆಲುಗು ಸೊಗಸಾಗಿಯೇ ಓದಲು ಬರುತ್ತಿತ್ತು.

ಮದ್ರಾಸಿನ ವರದಿಗಾರನೊಬ್ಬ ಅದನ್ನು ವರದಿ ಮಾಡಿದ್ದ. ಅಮೆರಿಕಾಕ್ಕೆ ತೆರಳುವ ತೀವ್ರ ಹಂಬಲದ ಸಾಕಷ್ಟು ತೆಲುಗು ಉದ್ಯೋಗಿಗಳು ವೀಸಾಕ್ಕಾಗಿ ಅಮೆರಿಕನ್ ಎಂಬೆಸಿಗೆ ಹೋದಾಗ ನಡೆದ ಘಟನೆಯ ವರದಿ ಅದಾಗಿತ್ತು. ತೆಲುಗು ಹುಡುಗರು ನಕಲಿ ಅಂಕಪಟ್ಟಿ, ಪದವಿ ಪಟ್ಟಿ